**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.36/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | ಭರಮಗೌಡ ಹುಂಚಿಕೊಪ್ಪನವರ | ಸಿಡಬ್ಲ್ಯೂ | 1 |
| ತಂದೆ ಹೆಸರು | ಕರಿಯಪ್ಪ | ಪಿಡಬ್ಲ್ಯೂ | 1 |
| ವಯಸ್ಸು | 32 ವರ್ಷ | | |
| ಉದ್ಯೋಗ | ಗಾರೆ ಕೆಲಸ | | |
| ವಾಸಸ್ಥಳ | ಕನಕಾಪುರ ತಾಃ ಹಾವೇರಿ | | |

**ದಿಃ 27.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ನನಗೆ ಚಾ.ಸಾ-2 ರಿಂದ 10 ರವರ ಪರಿಚಯ ಇರುತ್ತದೆ. ನಮ್ಮ ತಂದೆ ದಿನಾಂಕಃ 19.11.2024 ನೇ ಇಸ್ವಿಯಂದು ಮೃತಪಟ್ಟಿರುತ್ತಾರೆ. ನಮ್ಮ ತಂದೆ ಕೆ.ಎಸ್.ಆರ್.ಟಿ.ಸಿ ಬಸ್ಸ ಡಿಕ್ಕಿಪಡಿಸಿದ್ದರಿಂದ ಸದರಿ ಅಪಘಾತದಿಂದ ಆದ ಗಾಯಗಳಿಂದ ಮೃತಪಟ್ಟಿರುತ್ತಾರೆ. ಪ್ರಕರಣದಲ್ಲಿ ಆದ ಅಪಘಾತವು ಹಾವೇರಿಯ ಬಸನಿಲ್ದಾಣದಲ್ಲಿ ಬಸ್ಸು ಹೊರಗಡೆ ಬರುವ ಸ್ಥಳದಲ್ಲಿ ಆಗಿರುತ್ತದೆ. ಮದ್ಯಾಹ್ನ 1-30 ಘಂಟೆಗೆ ನಾನು ಕನಕಾಪುರದಲ್ಲಿ ಇದ್ದಾಗ ಅಪಘಾತ ಆಗಿರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ಕನಕಾಪುರಕ್ಕೂ ಮತ್ತು ಅಪಘಾತವಾದ ಸ್ಥಳಕ್ಕೂ 5 ಕಿ.ಮೀ ಅಂತರ ಇರುತ್ತದೆ. ನಾನು ಕನಕಾಪುರದಿಂದ ಮೋಟಾರ ಸೈಕಲ ಮೇಲೆ ಚಾ.ಸಾ-5 ಮಂಜುನಾಥ ಇಬ್ಬರೂ ಸೇರಿ ಮೋಟಾರ ಸೈಕಲ್ ಮೇಲೆ ಅಪಘಾತವಾದ ಸ್ಥಳಕ್ಕೆ ಬಂದಿರುತ್ತೇವೆ.

2) ನಾನು ಅಪಘಾತವಾದ ಸ್ಥಳಕ್ಕೆ ಬಂದು ನೋಡಿದಾಗ ನಮ್ಮ ತಂದೆಯ ಕಾಲು ಮುರಿದಿತ್ತು. ನಮ್ಮ ತಂದೆಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ ಬಸ್ಸು ಹಾವೇರಿ ಡಿಪ್ಪೋಗೆ ಸೇರಿದ ಬಸ್ಸು ಆಗಿರುತ್ತದೆ. ಅದರ ನಂಬರ ಕೆಎ-26/ಎಫ್-1040 ಅಂತಾ ಇತ್ತು. ಸದರಿ ಬಸ್ಸಿನ ಚಾಲಕನ ಹೆಸರು ಮಲ್ಲಿಕಸಾಬ ಎಂದು

ಗೊತ್ತಾಗಿರುತ್ತದೆ. ನಾನು ಮತ್ತು ಚಾ.ಸಾ-5 ಮಂಜುನಾಥ ಇಬ್ಬರೂ ಸೇರಿ ನಮ್ಮ ತಂದೆಯನ್ನು ಹಾವೇರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ನಮ್ಮ ತಂದೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಅದೇ ದಿವಸ ಸಂಜೆ 6-00 ಘಂಟೆಗೆ ನಮ್ಮ ತಂದೆ ಕಿಮ್ಸ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಸದರಿ ವಿಚಾರ ನನಗೆ ನನ್ನ ತಮ್ಮನಿಂದ ತಿಳಿದು ಬಂದಿರುತ್ತದೆ. ಈ ವಿಚಾರವಾಗಿ ನಾನು ಪೊಲೀಸ ಠಾಣೆಗೆ ಹೋಗಿ ಪಿರ್ಯಾದಿಯನ್ನು ಕೊಟ್ಟಿದ್ದೇನೆ. ಸದರಿ ಪಿರ್ಯಾದಿಯನ್ನು ಸಾಕ್ಷಿ ನೋಡುತ್ತಿದ್ದು ಅದರ ಮೇಲಿನ ಸಹಿಯನ್ನು ಗುರುತಿಸಿದ್ದರಿಂದ, ಪಿರ್ಯಾದಿಯನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು.

3) ಪೊಲೀಸರು ಹಾವೇರಿಯ ಬಸನಿಲ್ದಾಣದಲ್ಲಿ ಪಂಚನಾಮೆ ಮಾಡುವಾಗ ನಾನು ಸಹ ಸದರಿ ಪಂಚನಾಮೆಗೆ ಸಹಿ ಮಾಡಿದ್ದೇನೆ. ಸದರಿ ಪಂಚನಾಮೆಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು . ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ಮಾಡುವಾಗ ಘಟನಾ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಘಟನಾ ಸ್ಥಳದ ಪಂಚನಾಮೆ ಮಾಡುವಾಗ ನನ್ನ ಜೊತೆ ಚಾ.ಸಾ-2 ಮತ್ತು 4 ಇಬ್ಬರೂ ಸಹ ಸಹಿ ಮಾಡಿರುತ್ತಾರೆ.

4) ಸದರಿ ಪಂಚನಾಮೆ ಮಾಡಿದ ನಂತರ ಪೊಲೀಸರು ಅಪಘಾತವಾದ ಸ್ಥಳದಲ್ಲಿ 4 ಪೋಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿ.ಪಿ-3 ರಿಂದ ನಿ.ಪಿ-6 ಎಂದು ಗುರುತಿಸಲಾಯಿತು. ಅಪಘಾತವಾಗಿ ಮೂರು ದಿನದ ಬಳಿಕ ಘಟನಾ ಸ್ಥಳದ ಪಂಚನಾಮೆ ಮಾಡಿರುತ್ತಾರೆ. ಹಾವೇರಿಯ ಸಂಚಾರಿ ಪೊಲೀಸ ಠಾಣೆಯಲ್ಲಿ ನಿಲ್ಲಿಸಿದ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ತಮ್ಮ ವಶಕ್ಕೆ ಪಡೆದುಕೊಳ್ಳುವಾಗ ಮಾಡಿದ ಜಪ್ತು ಪಂಚನಾಮೆಗೆ ನಾನು ಕೂಡ ಸಹಿ

ಮಾಡಿದ್ದು, ಸದರಿ ವಾಹನ ಜಪ್ತು ಪಂಚನಾಮೆಯನ್ನು ನಿ.ಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಎರಡು ಪೋಟೋಗಳನ್ನು ನಿ.ಪಿ-8 ಮತ್ತು 9 ಎಂದು ಗುರುತಿಸಲಾಯಿತು. ನಮ್ಮ ತಂದೆಯ ಮೃತಪಡುವದಕ್ಕೆ ಕೆ.ಎಸ್.ಆರ್.ಟಿ.ಸಿ ಬಸ್ಸ ಚಾಲಕನೇ ಕಾರಣನಾಗಿರುತ್ತಾನೆ. ಆತನನ್ನು ನೋಡಿದರೆ ಗುರುತಿಸುತ್ತೇನೆ. ಆತನ ತಪ್ಪಿನಿಂದ ನನ್ನ ತಂದೆಗೆ ಅಪಘಾತವಾಗಿರುತ್ತದೆ.

**ಪಾಟೀ ಸವಾಲಿಗೆ ಅವಕಾಶ ಕೇಳಲಾಗಿ, ಅವಕಾಶ ಕೊಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.